**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,**
**ಚಿಕ್ಕಮಗಳೂರು**

ಸತ್ರ ಮೊಕದ್ದಮೆ ನಂಃ **198/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕಿರಣ್ ಕುಮಾರ್ ಪಿ | ಪಿಡಬ್ಲೂ -11 |
| ತಂದೆಯ ಹೆಸರು | - | ಪುಟ್ಟರಾಜೇಗೌಡ | ಸಿಡಬ್ಲೂ -32 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ಪಿ ಎಸ್ ಐ ಸಖರಾಯಪಟ್ಟಣ | |
| ವಾಸ ಸ್ಥಳ | - | ಸಖರಾಯಪಟ್ಟಣ | |

ದಿನಾಂಕಃ 20.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 18.07.2021 ರಿಂದ ದಿನಾಂಕ 19.07.2022 ರವರೆಗೆ ಬಸವನಹಳ್ಳಿ ಪಿ ಎಸ್ ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 23.09.2021 ರಂದು ಸಂಜೆ 5.35 ಗಂಟೆಗೆ ಠಾಣಾ ವ್ಯಾಪ್ತಿಯ ಉಪ್ಪಳ್ಳಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಫ್ರಾಸಾ.2 ರವರು ನನ್ನ ಇಲಾಖಾ ನಂಬರ್ ಗೆ ಕರೆ ಮಾಡಿ ಗೌರಿಕಾಲುವೆಯ ವಾಟರ್ ಟ್ಯಾಂಕ್ ಬಳಿ ಇರುವ ಶಾರದಾ ಕೋಂ ರವಿರವರ ಮನೆಯ ಮೊದಲನೇ ಮಹಡಿಯಲ್ಲಿ ವಾಸವಾಗಿದ್ದ ಸುಧಾ ಎಂಬ ಮಹಿಳೆಯ ಕೊಲೆಯಾಗಿದ್ದ ಬಗ್ಗೆ ಮಾಹಿತಿ ನೀಡಿರುತ್ತಾರೆ. ನಾನು ಕೂಡಲೇ ಚಿಕ್ಕಮಗಳೂರಿನ ಶೃಂಗಾರ್ ಸರ್ಕಲ್ ನಲ್ಲಿ ಗಸ್ತಿನಲ್ಲಿದ್ದ ಚಾಸಾ.33 ರವರಿಗೆ

ಫೋನ್ ಮಾಡಿ ನನಗೆ ಬಂದ ಮಾಹಿತಿಯನ್ನು ತಿಳಿಸಿದೆನು. ಆಗ ಚಾಸಾ.33 ರವರು ಮೌಖಿಕವಾಗಿ ನನಗೆ ಮುಂದಿನ ಕ್ರಮವನ್ನು ಜರುಗಿಸುವಂತೆ ತಿಳಿಸಿರುತ್ತಾರೆ. ಅದರ ಮೇರೆಗೆ ನಾನು ಕೂಡಲೇ ಮೇಲೆ ಹೇಳಿದ ಸ್ಥಳಕ್ಕೆ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿರುತ್ತೇನೆ. ಮೇಲೆ ಹೇಳಿದಂತೆ ಶಾರದಾ ಕೋಂ ರವಿ ಎಂಬುವವರಿಗೆ ಸೇರಿದ ಮನೆಯ ಮೊದಲನೇ ಮಹಡಿಯಲ್ಲಿದ್ದ ಮನೆಗೆ ಹೋಗಿ ನೋಡಲಾಗಿ ಅಲ್ಲಿ ಒಬ್ಬ ಮಹಿಳೆ ಅಂಗಾತವಾಗಿ ಸತ್ತು ಬಿದ್ದಿರುವುದು ಕಂಡು ಬಂತು. ಆಕೆಯ ಶವ ಮನೆಯ ಮುಂಬಾಗಿಲಿನ ಹಿಂಭಾಗದಲ್ಲಿ ಮನೆಯ ಒಳಭಾಗದಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿತ್ತು.

3. ಮನೆಯ ಒಳಗೆ ಹೋಗಿ ಅಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಲಾಗಿ ಒಬ್ಬ ವ್ಯಕ್ತಿ ತನ್ನ ಹೆಸರು ದುಷ್ಯಂತ್ ಎಂದು ತಿಳಿಸಿರುತ್ತಾನೆ. ಮತ್ತೊಬ್ಬ ವ್ಯಕ್ತಿ ತನ್ನ ಹೆಸರು ಸಂತೋಷ್ ಎಂದು ತಿಳಿಸಿ ಘಟನೆಯ ಬಗ್ಗೆ ಮಾಹಿತಿ ನೀಡಿ ದುಷ್ಯಂತ್ ತನ್ನ ಅಣ್ಣನೆಂದು ಮತ್ತು ಮೃತ ಮಹಿಳೆ ತನ್ನ ತಾಯಿಯೆಂದು ತಿಳಿಸಿರುತ್ತಾನೆ. ಅಲ್ಲಿದ್ದ ಆರೋಪಿ ದುಷ್ಯಂತನನ್ನು ವಿಚಾರಿಸಿದಾಗ ಆತ ತನ್ನ ತಾಯಿಯನ್ನು ಖರ್ಚಿಗೆ ಹಣವನ್ನು ಕೊಡುವಂತೆ ಕೇಳಿದ್ದಾಗಿ, ಆಕೆ ಕೊಡದಿದ್ದಾಗ ಆತ ಆಕೆಯ ತಲೆಯನ್ನು ಗೋಡೆಗೆ ಗುದ್ದಿಸಿ ಮತ್ತು ಕಾಲಿನಿಂದ ಒದ್ದು ಸಾಯಿಸಿದ್ದಾಗಿ ತಿಳಿಸಿದನು. ಕೃತ್ಯ ನಡೆದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ಬಿಚ್ಚಿ ಅವುಗಳನ್ನು ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ತಮ್ಮ ಮನೆಯ ಅಡುಗೆ ಮನೆಯ ಮೂಲೆಯಲ್ಲಿ ಇಟ್ಟಿರುವುದಾಗಿ ತಿಳಿಸಿದನು. ನಂತರ ನಾನು ಫ್ರಾಸಾ.1 ಸಂತೋಷ್ ರವರಿಗೆ ಬಸವನಹಳ್ಳಿ ಪೊಲೀಸ್ ಠಾಣೆಗೆ ಹೋಗಿ

ದೂರನ್ನು ನೀಡುವಂತೆ ತಿಳಿಸಿರುತ್ತೇನೆ.

4. ಕೃತ್ಯ ನಡೆದ ಸ್ಥಳವನ್ನು ಸಂರಕ್ಷಿಸುವ ಸಲುವಾಗಿ ಸಿಬ್ಬಂದಿಗಳನ್ನು ಸ್ಥಳಕ್ಕೆ ನೇಮಿಸಿ ಆರೋಪಿಯನ್ನು ಕರೆದುಕೊಂಡು ಠಾಣೆಗೆ ಹಿಂದಿರುಗಿರುತ್ತೇನೆ. ಠಾಣೆಗೆ ಹಿಂದಿರುಗಿ ಆರೋಪಿಯನ್ನು ಸೂಕ್ತ ಭದ್ರಿಕೆಯಲ್ಲಿ ಇರಿಸಿರುತ್ತೇನೆ. ಫ್ರಾಸಾ.1 ಸಂತೋಷ್ ರವರು ಅದೇ ದಿನ ಸಂಜೆ 6.30 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದು ಅದರ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 68/2021 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

5. ಸದರಿ ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1 (ಬಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

6. ನಂತರ ಕೃತ್ಯ ನಡೆದ ಸ್ಥಳಕ್ಕೆ ಸಂಜೆ 7.25 ಗಂಟೆಗೆ ಭೇಟಿ ನೀಡಿರುತ್ತೇನೆ. ಅಲ್ಲಿಗೆ ಫ್ರಾಸಾ.2 ಮತ್ತು ಫ್ರಾಸಾ.3 ರವರನ್ನು ಬರಮಾಡಿಕೊಂಡು ಅವರಿಗೆ ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ.11(ಸಿ) ಎಂದು ಗುರುತಿಸಲಾಯಿತು.

7. ಸದರಿ ಪಂಚರ ಸಮಕ್ಷಮ ಮೇಲೆ ಹೇಳಿದಂತೆ ಕೃತ್ಯ ನಡೆದಿದ್ದ ಸ್ಥಳವನ್ನು ಪರಿಶೀಲಿಸಲಾಗಿ ಮನೆಯ ಮುಂಬಾಗಿಲಿನ ಹಿಂಭಾಗದಲ್ಲಿ ಮನೆಯ ಒಳಭಾಗದಲ್ಲಿ ಸುಧಾಳ ಮೃತ ದೇಹವು ಅಂಗಾತವಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದು, ಆಕೆಯ ತಲೆಯ ಕೂದಲು ಕೆದರಿದ್ದು, ಆಕೆಯ ಬಲಭಾಗದ ಕಿವಿ ಹರಿದು ರಕ್ತಸ್ರಾವವಾಗಿರುವುದು ಕಂಡು ಬಂತು, ಆಕೆಯ ಮೂಗಿನಲ್ಲಿಯೂ ಸಹ ರಕ್ತಸ್ರಾವವಾಗಿರುವುದು ಕಂಡು ಬಂತು. ರಕ್ತವು ನೆಲದ ಮೇಲೆ ಹರಿದಿರುವುದು ಮತ್ತು ಗೋಡೆಯ ಮೇಲೆ ಚಿಮ್ಮಿರುವುದು ಕಂಡು ಬಂತು. ಆಕೆಯ ಬಲಭಾಗದ ಕುತ್ತಿಗೆಯ ಹತ್ತಿರ ಮತ್ತು ಬಲಭುಜದ ಹತ್ತಿರ ಹೊತ್ತಿದ ಗಾಯವಾಗಿರುವುದು ಕಂಡು ಬಂತು, ಆಕೆಯ ಕಣ್ಣುಗಳು ಮುಚ್ಚಿದ್ದು, ಬಾಯಿ ಅರ್ಧ ತೆರೆದಿರುವುದು ಕಂಡು ಬಂತು, ಆಕೆಯ ಕಣ್ಣಿನ ಸುತ್ತ ಕಪ್ಪಾಗಿರುವುದು ಕಂಡು ಬಂತು.

8. ಕೂಡಲೇ ನಾನು ಪಂಚರ ಸಮಕ್ಷಮ ಎರಡೂ ear bud ಗಳನ್ನು ತೆಗೆದುಕೊಂಡು ನೆಲದ ಮೇಲೆ ನಿಂತಿದ್ದ ರಕ್ತದ ಮಾದರಿಯನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಸಂಗ್ರಹಿಸಿಕೊಂಡು ಅದನ್ನು ಒಂದು ಕವರ್ ನಲ್ಲಿ ಹಾಕಿ ಭದ್ರಪಡಿಸಿ ಅದಕ್ಕೆ ನನ್ನ ಮತ್ತು ಪಂಚರ ಸಹಿಗಳಿರುವ ಚೀಟಿಯನ್ನು ಅಂಟಿಸಿ, ಎರಡೂ ಕಡೆ 'P' ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ear bud ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.4 ಎಂದು ಗುರುತಿಸಲ್ಪಟ್ಟಿರುವ ear bud

ಗಳನ್ನು ನೋಡಿ ಮೇಲೆ ಹೇಳಿದಂತೆ ಕೃತ್ಯ ನಡೆದ ಸ್ಥಳದಲ್ಲಿ ನೆಲದ ಮೇಲೆ ಇದ್ದ ರಕ್ತದ ಕಲೆಗಳನ್ನು ಹೊರೆಸಿ ಸಂಗ್ರಹಿಸಿಕೊಂಡ ear bud ಗಳು ಅವೇ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮು.ಮಾ.4 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.4(ಬಿ) ಎಂದು ಗುರುತಿಸಲಾಯಿತು.

9. ನಂತರ ಮನೆಯ ಹಾಲು ಮತ್ತು ಅಡುಗೆ ಮನೆಯ ಮೂಲೆಯಲ್ಲಿ ಆರೋಪಿ ಒಂದು ಕವರ್ ನಲ್ಲಿ ಇಟ್ಟಿದ್ದ ಆಕಾಶ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಒಂದು ತುಂಬು ತೋಳಿನ ನೀಲಿ ಮತ್ತು ಹಸಿರು ಬಣ್ಣದ ತುಂಬು ತೋಳಿನ ಚೆಕ್ಸ್ ಶರ್ಟು ಇರುವುದು ಕಂಡು ಬಂತು, ಅವುಗಳಿಗೆ ರಕ್ತದ ಕಲೆ ಅಂಟಿರುವುದು ಕಂಡು ಬಂತು. ಅವುಗಳನ್ನು ನಾನು ಮೇಲೆ ಹೇಳಿದ ಪಂಚರ ಸಮಕ್ಷಮ ಪ್ರತ್ಯೇಕವಾಗಿ ಬಿಳಿಯ ಬಟ್ಟೆಗಳ ಚೀಲಗಳಿಗೆ ಹಾಕಿ ದಾರದಲ್ಲಿ ಹೊಲೆದು ಪಂಚರ ಮತ್ತು ನನ್ನ ಸಹಿಗಳಿರುವ ಚೀಟಿಯನ್ನು ಅಂಟಿಸಿ, ಅರಗಿನಿಂದ ಎರಡು ಕಡೆ 'P' ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಪ್ಯಾಂಟು ಮತ್ತು ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪ್ಯಾಂಟು ಮತ್ತು ಶರ್ಟನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮು.ಮಾ.2 ಮತ್ತು ಮು.ಮಾ.3 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.2(ಸಿ) ಮತ್ತು ಮು.ಮಾ.3(ಸಿ) ಎಂದು

ಗುರುತಿಸಲಾಯಿತು.

10. ಆ ಬಗ್ಗೆ ಸ್ಥಳದಲ್ಲಿ ಸಂಜೆ 7.30 ರಿಂದ 8.00 ಗಂಟೆಯವರೆಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ ಮತ್ತು ಅದರಲ್ಲಿ ಸ್ಥಳದ ಕಚ್ಚಾ ನಕ್ಷೆಯನ್ನು ಬಿಡಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಸಿ) ಎಂದು ಗುರುತಿಸಲಾಯಿತು.

11. ಸದರಿ ಪಂಚನಾಮೆಯ ಕಾಲಕ್ಕೆ ಚಾಸಾ.29 ರವರಿಂದ ಇಲಾಖೆಯಿಂದ ಒದಗಿಸಲಾಗಿದ್ದ ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.3 ರಿಂದ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ನಿಪಿ.12 ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ.

12. ಠಾಣೆಗೆ ಹಿಂದಿರುಗಿ ಮೇಲೆ ಹೇಳಿದಂತೆ ನಿಪಿ.12 ಪಂಚನಾಮೆಯ ಕಾಲಕ್ಕೆ ಅಮಾನತುಪಡಿಸಿಕೊಂಡಿದ್ದ ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 51/2021 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.25 ಎಂದು, ಸಾಕ್ಷಿಯ ನಿಪಿ.25(ಎ) ಎಂದು ಗುರುತಿಸಲಾಯಿತು.

13. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.33 ರವರಿಗೆ ನೀಡಿರುತ್ತೇನೆ.

14. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು:**

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ